ದಿನಾಂಕಃ 03-04-2019 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಸಿ ಬಿ ವಕೀಲರಿಂದಃ</u>

ನಂಜಾಚಾರಿಯವರು ಹಾಲಿ ಜೀವಂತವಾಗಿಲ್ಲ, ಅವರು ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ಇದುವರೆವಿಗೂ ಅವರ ವಾರಸುದಾರರನ್ನು ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿಯು ಸುಮ್ಮನಿದ್ದಾರೆ. ನಂಜಾಚಾರಿಯವರಿಗೆ 3 ಜನ ಮಕ್ಕಳು, ಅವರುಗಳೆಂದರೆ ಶಿವಣ್ಣಾಚಾರಿ, ಕಾಳಾಚಾರಿ ಮತ್ತು ಬೋಗಾಚಾರಿ. ನಂಜಾಚಾರಿಯವರ ಹೆಂಡತಿ ಹೆಸರು ನನಗೆ ಗೊತ್ತಿಲ್ಲ. ಅವರು ಹಾಲಿ ಜೀವಂತವಿಲ್ಲ. ಕಾಳಾಚಾರಿಯವರೂ ಸಹಾ ತೀರಿಕೊಂಡಿದ್ದಾರೆ. ಅವರಿಗೆ ಗಣೇಶ ಎಂಬ ಒಬ್ಬ ಮಗನಿದ್ದಾನೆ. ಕಾಳಾಚಾರಿಯವರ ಹೆಂಡತಿ ಕೂಡಾ ಇದ್ದಾರೆ. ಅವರನ್ನು ಈಃ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದಿದ್ದಾರೆ. ನಂಜಾಚಾರಿಯವರ ತಂದೆಯ ಹೆಸರು ಬೋಗಾಚಾರಿ ಎಂದರೆ ನನಗೆ ಗೊತ್ತಿಲ್ಲ.

ಈ ದಾವೆಯನ್ನು ಮಲ್ಲಪ್ಪರವರ ಮೇಲೆ ಮಾತ್ರ ಹೂಡಿದ್ದೇನೆ. ನಮಗೆ ಕ್ರಯವಾದ ಜಮೀನು ಅವರು ಕ್ರಯ ಮಾಡಿಕೊಂಡಿದ್ದಾರೆಂದು ಈ ದಾವೆ ಹೂಡಿದ್ದೇನೆ. ಪ್ರಸ್ತುತ ದಾವೆಯಲ್ಲಿ ಅವರಿಗೆ ಆದಂತಹ ಕ್ರಯ ರದ್ದು ಮಾಡಬೇಕಂದು ನಾನು ಕೇಳಿದ್ದೇನೆ. ಅವರಿಗೆ ಕ್ರಯಪತ್ರ ಯಾವಾಗ ಆಯಿತು ಎಂದು ನನಗೆ ಗೊತ್ತಿಲ್ಲ 1 ನೇ ಪ್ರತಿವಾದಿಗೆ ಆಗಿರುವ ಕ್ರಯಪತ್ರವನ್ನು ನ್ಯಾಕ್ಕೆ ಹಾಜರುಪಡಿಸಿಲ್ಲ.1 ನೇ ಪ್ರತಿವಾದಿಗೆ ಆದಂತಹ ಕ್ರಯ ಆದ 20 ದಿನಗಳ ನಂತರ ನನಗೆ ಸದರಿ ವಿಚಾರ ಗೊತ್ತಾಗಿದೆ. ನಾನು ಪಿಯುಸಿ ವರೆಗೆ ವ್ಯಾಸಂಗ ಮಾಡಿದ್ದೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ಹುಣಸೂರು ತಾಲ್ಲೋಕು, ಹನಗೋಡು ಹೋಬಳಿ, ಕಲ್ಲಹಳ್ಳಿ ಗ್ರಾಮದಲ್ಲಿ ವಾಸವಾಗಿರುವ ದಿವಂಗತ ಸುಬ್ಬಯ್ಯನವರ ಮಗ ಕೆ.ಎಸ್.ಮಲ್ಲಪ್ಪ ಅಂದರೆ ನ್ಯಾ.ದ ಮುಂದೆ ಕೂತಿರುವಂತಹ 1 ನೇ ಪ್ರತಿವಾದಿ ಎಂದರೆ ಸರಿ. 1 ನೇ ಪ್ರತಿವಾದಿಗೆ ದಿಃ 07-01-2005 ರಲ್ಲಿ ಕ್ರಯ ಆಗಿರುತ್ತದೆ. ಸಾಕ್ಷಿಗೆ ಕ್ರಯಪತ್ರ ತೋರಿಸಿ, ಸಾಕ್ಷಿ ಅದನ್ನು ನಿಡಿ-1 ಎಂದು ಗುರುತಿಸಲಾಯಿತು.



ನಿಡಿ-1 ರಲ್ಲಿ ಸರ್ವೆ ನಂಃ 83/6 ರ ಜಮೀನನ್ನು 1 ನೇ ಪ್ರತಿವಾದಿ ಕ್ರಯಕ್ಕೆ ಪಡೆದಿದ್ದಾರೆ ಎಂದರೆ ಸರಿ. ನಿಡಿ-1 ಕ್ರಯಪತ್ರವನ್ನು ನಾನು ಪ್ರಶ್ನೆ ಮಾಡಿಲ್ಲ.

**(**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗಾಗಿ ಕಾಲಾವಕಾಶಕೋರಿದ್ದರಿಂದ ಮುಂದೂಡಲಾಯಿತು**).**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.